825

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹೊಸದುರ್ಗ ತಾಲ್ಲೂಕಿನಲ್ಲಿ ಸಾವಯವ ಕೃಷಿ ಮಿಷನ್ ಯೋಜನೆಯಡಿ ಅವ್ಯವಹಾರದಲ್ಲಿ ಭಾಗಿಯಾಗಿರುವ ಬಗ್ಗೆ ಶ್ರೀ ಕೆ. ಓಂಕಾರಪ್ಪ, ಇವರ ವಿರುದ್ಧದ ಶಿಸ್ತು ಕ್ರಮ ಕುರಿತು.

ಓದಲಾಗಿದೆ.

1) ಆಯುಕ್ತರು, ಕೃಷಿ ಇಲಾಖೆರವರ ಪತ್ರ ಸಂಖ್ಯೆ:ಸಿಬ್ಬಂದಿ-1/ವಿಚಾರಣೆ-2/14/2009-10, ದಿನಾಂಕ:07-12-2011
2) ಸರ್ಕಾರದ ಕಾರಣ ಕೇಳುವ ಪತ್ರ ಸಂಖ್ಯೆ:ಕೃಇ 8 ಕೃಪವಿ 2012, ದಿನಾಂಕ:15-06-2012.
3) ಶ್ರೀ ಕೆ. ಓಂಕಾರಪ್ಪ, ಸಹಾಯಕ ಕೃಷಿ ನಿರ್ದೇಶಕರು, ಇವರ ಲಿಖಿತ ಹೇಳಿಕೆ ದಿನಾಂಕ:16-07-2012.
4) ಸರ್ಕಾರದ ಪತ್ರ ಸಂಖ್ಯೆ:ಕೃಇ 8 ಕೃಪವಿ 2012, ದಿನಾಂಕ:08-10-2012,
5) ಆಯುಕ್ತರು, ಕೃಷಿ ಇಲಾಖೆರವರ ಪತ್ರ ಸಂಖ್ಯೆ:ಸಿಬ್ಬಂದಿ-1/ವಿಚಾರಣೆ-2/14/2009-10, ದಿನಾಂಕ:02-07-2013.

ಪ್ರಸ್ತಾವನೆ:-

ಮೇಲೆ ಕ್ರಮಾಂಕ(1)ರಲ್ಲಿ ಓದಲಾದ ಕೃಷಿ ಆಯುಕ್ತರ ಪತ್ರದಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಸಾವಯವ ಕೃಷಿ ಮಿಷನ್ ಯೋಜನೆಯಡಿಯಲ್ಲಿ ಅವ್ಯವಹಾರದಲ್ಲಿ ಭಾಗಿಯಾಗಿರುವರು ಎಂದು ಹೇಳಲಾದ ಶ್ರೀ ಕೆ. ಓಂಕಾರಪ್ಪ, ಸಹಾಯಕ ಕೃಷಿ ನಿರ್ದೇಶಕರು, ಮತ್ತು ಶ್ರೀ ಆರ್. ಚಂದ್ರಪ್ಪ, ಅಧೀಕ್ಷಕರು, ಇವರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಕಳುಹಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಮೇಲೆ ಕ್ರಮಾಂಕ(2)ರಲ್ಲಿ ಓದಲಾದ ಸರ್ಕಾರದ ಕಾರಣ ಕೇಳುವ ಪತ್ರದಲ್ಲಿ ಸದರಿ ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ)ನಿಯಮಾವಳಿ ನಿಯಮ 1957ರ ನಿಯಮ 11ರಡಿ ಆಪಾದನಾ ಪಟ್ಟಿಯನ್ನು ಜಾರಿ ಮಾಡಲಾಗಿತ್ತು.

ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಶ್ರೀ ಕೆ. ಓಂಕಾರಪ್ಪ, ಸಹಾಯಕ ಕೃಷಿ ನಿರ್ದೇಶಕರು(ಸ್ವತಂತ್ರ ಪ್ರಭಾರ), ಮತ್ತು ಶ್ರೀ ಆರ್. ಚಂದ್ರಪ್ಪ, ಅಧೀಕ್ಷಕರು, ಇವರುಗಳು ತಮಗೆ ಜಾರಿ ಮಾಡಿದ ಕಾರಣ ಕೇಳುವ ಪತ್ರಕ್ಕೆ ಮೇಲೆ ಕ್ರಮಾಂಕ(3)ರಲ್ಲಿ ಓದಲಾದ ಪತ್ರದಲ್ಲಿ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ತಮ್ಮಿಂದ ಯಾವುದೇ ಲೋಪವಾಗಿರುವುದಿಲ್ಲವೆಂದು ತಿಳಿಸಿರುವುದಲ್ಲದೇ ಚೆಕ್ ಕಳುವಾಗಿರುವ ಸದರಿ ಆರೋಪಕ್ಕೆ ಸಂಬಂಧಿಸಿದಂತೆ ಪ್ರಕರಣವು ಪೋಲೀಸ್ ಠಾಣೆಯಲ್ಲಿ ತನಿಖೆಯಲ್ಲಿರುವುದಾಗಿ ತಿಳಿಸಿ, ತಮ್ಮನ್ನು ಆಪಾದನೆಯಿಂದ ಮುಕ್ತರನ್ನಾಗಿ ಮಾಡುವಂತೆ ಕೋರಿರುತ್ತಾರೆ.

[illegible] ಜಂಟಿ ಕೃಷಿ ನಿರ್ದೇಶಕರಿಂದ ವಿಮರ್ಶಿಸಿ / ಪರಿಶೀಲನೆ ನಡೆಸಿ ಸದರಿ ಅಧಿಕಾರಿಗಳನ್ನು ವಿಚಾರಣೆ ಗುರಿಪಡಿಸುವ ಬಗ್ಗೆ ವರದಿಯನ್ನು ಸ್ಪಷ್ಟ ಅಭಿಪ್ರಾಯದೊಂದಿಗೆ ಸಲ್ಲಿಸುವಂತೆ ಮೇಲೆ ಕ್ರಮಾಂಕ (4)ರಲ್ಲಿ ಓದಲಾದ ಸರ್ಕಾರದ ದಿನಾಂಕ:08-10-2012ರ ಪತ್ರದಲ್ಲಿ ಕೃಷಿ ಆಯುಕ್ತರನ್ನು ಕೋರಲಾಗಿತ್ತು.

ಅದರಂತೆ ಕೃಷಿ ಆಯುಕ್ತರು, ಮೇಲೆ ಕ್ರಮಾಂಕ (5)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಪ್ರಕರಣದಲ್ಲಿ ಜಂಟಿ ಕೃಷಿ ನಿರ್ದೇಶಕರು, ಚಿತ್ರದುರ್ಗ ಜಿಲ್ಲೆ ಇವರನ್ನು ಈ ಪ್ರಕರಣದ ಬಗ್ಗೆ ಪರಿಶೀಲನೆ ನಡೆಸಿ ವರದಿ ನೀಡುವಂತೆ ನೇಮಿಸಿದ್ದು, ಅದರಂತೆ ಸದರಿ ಜಂಟಿ ಕೃಷಿ ನಿರ್ದೇಶಕರು, ಈ ಪ್ರಕರಣದಲ್ಲಿ ಪರಿಶೀಲನೆ ನಡೆಸಿ ವರದಿ ನೀಡಿರುತ್ತಾರೆಂದು ತಿಳಿಸಿರುತ್ತಾರೆ ಮತ್ತು ಅವರು ತಮ್ಮ ವರದಿಯಲ್ಲಿ ಶ್ರೀ ಕೆ. ಓಂಕಾರಪ್ಪನವರು ಕಾರಣಾಂತರಗಳಿಂದ ಜಂಟಿ ಕೃಷಿ ನಿರ್ದೇಶಕರವರ ಆದೇಶದಂತೆ ಹೊಸದುರ್ಗದ ಸಹಾಯಕ ಕೃಷಿ ನಿರ್ದೇಶಕರ ಪ್ರಭಾರವನ್ನು ದಿನಾಂಕ: 07-07-2009 ರಿಂದ 31-08-2009ರವರೆಗೆ ವಹಿಸಿಕೊಂಡಿರುತ್ತಾರೆ. ಸಾವಯವ ಕೃಷಿ ಮಿಷನ್ ಯೋಜನೆಯು ಅದೇ ವರ್ಷದಲ್ಲಿ ಆರಂಭವಾಗಿದ್ದು, ಕಾರ್ಯಕ್ರಮ ಅನುಷ್ಠಾನದಲ್ಲಿ ಸರ್ಕಾರೇತರ ಸಂಸ್ಥೆಗಳು ಪಾಲುದಾರರಾಗಿದ್ದು, ಇಲಾಖೆಯಲ್ಲಿ ಇದೇ ಮೊದಲು ಹಾಗೂ ಪ್ರಾರಂಭಿಕ ಹಂತದಲ್ಲಿ ಈ ಯೋಜನೆಯ ಮಾರ್ಗಸೂಚಿಯಲ್ಲಿ ಅನೇಕ ಗೊಂದಲಗಳಿರುವುದು ವಾಸ್ತವವಾಗಿದೆ ಎಂಬುದಾಗಿ ತಿಳಿಸಿ, ಶ್ರೀ ಕೆ. ಓಂಕಾರಪ್ಪನವರು ಯಾವುದೇ ದುರುದ್ದೇಶವಿಲ್ಲದೆ ತಮ್ಮ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ. ಆದರೆ ಕೆಲಸದ ಒತ್ತಡ ಮತ್ತು ಸಿಬ್ಬಂದಿಯ ಕೊರತೆಯಿಂದಾಗಿ ಕರ್ತವ್ಯ ನಿರ್ವಹಿಸುವಲ್ಲಿ ಕೆಲವು ಸಣ್ಣಪುಟ್ಟ ವಿಧಿ ವಿಧಾನಗಳ ಲೋಪ ಆಗಿರಬಹುದು. ಆದರೆ ಈ ಪ್ರಕರಣದಲ್ಲಿ ರೂ.3,30,000/-ಗಳ ಸರ್ಕಾರದ ಹಣ ದುರುಪಯೋಗವಾಗಿರುವುದಿಲ್ಲ. ಈ ಪ್ರಕರಣದ ಬಗ್ಗೆ ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸದುರ್ಗದಲ್ಲಿ ಕರ್ನಾಟಕ ಬ್ಯಾಂಕ್‌ರವರು ದಾವೆ ಹೂಡಿರುತ್ತಾರೆ. ಕಾಣೆಯಾದ ನಗದೀಕರಿಸಿದ ಚೆಕ್ ಬಗ್ಗೆ ಪ್ರಕರಣ ಪೋಲಿಸ್ ಠಾಣೆ, ಹೊಸದುರ್ಗದಲ್ಲಿ ದಾಖಲಾಗಿರುತ್ತದೆ. ಆದ್ದರಿಂದ ಶ್ರೀ ಕೆ. ಓಂಕಾರಪ್ಪನವರ ಮೇಲೆ ಇಲಾಖೆಯ ವಿಚಾರಣೆ ಅಗತ್ಯವಿರುವುದಿಲ್ಲವೆಂಬ ಅಭಿಪ್ರಾಯ ನೀಡಿರುತ್ತಾರೆಂದು ಕೃಷಿ ಆಯುಕ್ತರು ವರದಿ ಮಾಡಿ, ಜಂಟಿ ಕೃಷಿ ನಿರ್ದೇಶಕರ ಸದರಿ ವರದಿಯನ್ನು ಪರಿಗಣಿಸಬಹುದೆಂದು ತಿಳಿಸಿರುತ್ತಾರೆ.

ಕೃಷಿ ಆಯುಕ್ತರ ಮೇಲ್ಕಂಡ ವರದಿಯನ್ನು ಪರಿಶೀಲಿಸಿದ ಸರ್ಕಾರ ಶ್ರೀ ಕೆ. ಓಂಕಾರಪ್ಪ, ಸಹಾಯಕ ಕೃಷಿ ನಿರ್ದೇಶಕರು, ಹೊಸದುರ್ಗ, ಇವರನ್ನು ಈ ಪ್ರಕರಣದಲ್ಲಿನ ಅವರ ಮೇಲಿನ ಆರೋಪಗಳಿಂದ ಕೈಬಿಡಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಕೃಇ 8 ಕೃಪವಿ 2012, ಬೆಂಗಳೂರು, ದಿನಾಂಕ:25-10-2013.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಶ್ರೀ ಕೆ. ಓಂಕಾರಪ್ಪ, ಸಹಾಯಕ ಕೃಷಿ ನಿರ್ದೇಶಕರು, ಹೊಸದುರ್ಗ. (ಹಾಲಿ .ನಿವೃತ್ತ) ಇವರನ್ನು ಈ ಪ್ರಕರಣದಲ್ಲಿ ಜರುಗಿಸಲು ಉದ್ದೇಶಿಸಿದ್ದ ಶಿಸ್ತು ಕ್ರಮದಿಂದ ಕೈಬಿಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ)ಜಿಇ-05, ಕರ್ನಾಟಕ ಬೆಂಗಳೂರು.
2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು,
3) ಜಂಟಿ ಕೃಷಿ ನಿರ್ದೇಶಕರು, ಚಿತ್ರದುರ್ಗ /ಚಿಕ್ಕಮಗಳೂರು
4) ಮಾನ್ಯ ಕೃಷಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು,
5) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
6) ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಇಲಾಖೆ ಇವರ ಆಪ್ತ ಸಹಾಯಕರಿಗೆ.
7) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.